ಯೋಜನೆ	ಅಂದಾಜು ವೆಚ್ಚ (ರೂ.ಕೋಟಿಗಳಲ್ಲಿ)	ಉದ್ದೇಶಿತ ನೀರಾವರಿ ಕ್ಷೇತ್ರ (ಹೆಕ್ಟೇರ್‌ಗಳಲ್ಲಿ)
ಕೃ.ಮೇ. ಯೋ ಘಟ್ಟ–III	17,207.00	
ಮುಳವಾಡ ಏ.ನೀ.ಯೋ		2,27,966
ಚಿಮ್ಮಲಗಿ ಏ.ನೀ.ಯೋ		87,067
ಇಂಡಿ ಏ.ನೀ.ಯೋ		20,690
ಎನ್‌ಎಲ್‌ಬಿಸಿ ವಿಸ್ತರಣೆ		61,747
ರಾಂಪುರ ಏ.ನೀ.ಯೋ ವಿಸ್ತರಣೆ		13,923
ಮಲ್ಲಾಬಾದ್ ಏ.ನೀ.ಯೋ		33,730
ಕೊಪ್ಪಳ ಏ.ನೀ.ಯೋ		48,436
ಭೀಮಾ ದಂಡೆ ಏ.ನೀ.ಯೋ		21,572
ಹೆರ್ಕಲ್ ಏ.ನೀ.ಯೋ		15,344
ಒಟ್ಟು		**5,30,475**
ತುಂಗಾ ಮೇಲ್ದಂಡೆ ಯೋಜನೆ	2,330.60	80,494
ಭದ್ರಾ ಮೇಲ್ದಂಡೆ ಯೋಜನೆ	5,985.00	1,07,265
ಸಿಂಗಟಾಲೂರು ಏ.ನೀ.ಯೋ.	657.00	67,584

ಐ.ಟಿ.ಐ. ಕಾಲೇಜುಗಳಲ್ಲಿ ಸಿಬ್ಬಂದಿ ಕೊಠಡಿಗಳ ಕೊರತೆ

601 (790) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಗುಡಿಬಂಡೆ ವಿಧಾನಸಭಾ ಕ್ಷೇತ್ರದಲ್ಲಿ ಐ.ಟಿ.ಐ. ಕಾಲೇಜು ಮಂಜೂರಾಗಿದ್ದು, ಈ ಕಾಲೇಜಿಗೆ ವಿದ್ಯಾರ್ಥಿಗಳಿಗೆ ಬೇಕಾದಂತಹ ಮೂಲಭೂತ ಸೌಲಭ್ಯಗಳಾದ ಕಟ್ಟಡಗಳು, ಸಿಬ್ಬಂದಿ ಹಾಗೂ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇವುಗಳ ಕೊರತೆ ನೀಗಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಶ್ರೀ ಬಿ.ಎಸ್. ಬಚ್ಚೇಗೌಡ (ಕಾರ್ಮಿಕ ಸಚಿವರು) :
ಅ) ಹೌದು.

ಆ) ಬಾಗೇಪಲ್ಲಿ ಕೈ.ತ.ಸಂಸ್ಥೆಯಲ್ಲಿ 7707.96 ಚದರಡಿಗಳ ಒಂದು ಕಟ್ಟಡ ಮತ್ತು ಗುಡಿಬಂಡೆಯಲ್ಲಿ ಒಟ್ಟು 6030.84 ಚದರಡಿಗಳ ಎರಡು ಖಾಸಗಿ ಕಟ್ಟಡಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಸಂಸ್ಥೆಗಳನ್ನು ನಡೆಸಲಾಗುತ್ತಿದೆ.

ಕೈ.ತ.ಸಂ., ಗುಡಿಬಂಡೆ ಮತ್ತು ಬಾಗೇಪಲ್ಲಿ ಇಲ್ಲಿಗೆ ನಿಯೋಜನೆ ಮೂಲಕ ಸಿಬ್ಬಂದಿಯನ್ನು ಒದಗಿಸಲಾಗಿರುತ್ತದೆ ಹಾಗೂ ತಾತ್ಕಾಲಿಕವಾಗಿ ಅತಿಥಿ ಬೋಧಕರನ್ನು ಆಹ್ವಾನಿಸಿಕೊಂಡು ತರಬೇತಿ ನಡೆಸಲಾಗುತ್ತಿದೆ. ದಿನಾಂಕ: 22–02–2012ರ ಸರ್ಕಾರಿ ಆದೇಶದ ಮೂಲಕ ಸದರಿ ಸಂಸ್ಥೆಗೆ ಹುದ್ದೆಗಳು ಮಂಜೂರಾಗಿದ್ದು, ಅದರಂತೆ, 2 ಕಿರಿಯ ತರಬೇತಿ ಅಧಿಕಾರಿಗಳನ್ನು ಹಾಗೂ ಒಬ್ಬ ಕಛೇರಿ ಅಧೀಕ್ಷಕರನ್ನು ಗುಡಿಬಂಡೆ ಕೈಗಾರಿಕಾ ತರಬೇತಿ ಸಂಸ್ಥೆಗೆ ವರ್ಗಾವಣೆ ಮಾಡಲಾಗಿದೆ. ಒಬ್ಬ ತರಬೇತಿ ಅಧಿಕಾರಿಯನ್ನು ಬಾಗೇಪಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗೆ ವರ್ಗಾಯಿಸಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗಕ್ಕೆ 548 ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಯನ್ನು ನೇಮಕಾತಿಗಾಗಿ ಅಧಿಸೂಚಿಸಲಾಗಿದ್ದು, ಆಯೋಗದಿಂದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯು ಬಂದ ನಂತರ ಆದ್ಯತೆಯ ಮೇರೆಗೆ ಸಿಬ್ಬಂದಿ ಹಾಗೂ ಉಪನ್ಯಾಸಕರನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಬಾಗೇಪಲ್ಲಿಯಲ್ಲಿ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ 7.23 ಎಕರೆ ಮತ್ತು ಗುಡಿಬಂಡೆಯಲ್ಲಿ 1.5 ಎಕರೆ ಸರ್ಕಾರಿ ಜಮೀನು ಮಂಜೂರಾಗಿದ್ದು ಅನುದಾನ ಲಭ್ಯವಾದಾಗ ಸ್ವಂತ ಕಟ್ಟಡ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಐ.ಟಿ.ಐ ಕಾಲೇಜು ಪ್ರಾರಂಭ

598 (782) ಶ್ರೀ ರುದ್ರೇಶಗೌಡ ವೈ.ಎನ್ (ಬೇಲೂರು) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನಲ್ಲಿ ಸರ್ಕಾರಿ ಐ.ಟಿ.ಐ. ಕಾಲೇಜ್ ಪ್ರಾರಂಭವಾಗಿರುವುದು ನಿಜವೇ;

ಆ) ಈ ಶಿಕ್ಷಣ ಸಂಸ್ಥೆಯು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;